KATK900005432019

**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**

**ತಿಪಟೂರು**

**ಎಸ್.ಸಿ.ಸಂಖ್ಯೆ: 10039/2019**

**ಪ್ರಮಾಣೀಕರಿಸಿದ ದಿನಾಂಕ: 20.12.2025.**

**ಚಾ.ಸಾ-27**

**ಪ್ರಾ.ಸಾ-23**

| | |
|---|---|
| ಹೆಸರು | ಜಿ.ಪಿ. ರಾಜ್ |
| ತಂದೆ ಹೆಸರು | ಪುಟ್ಟೇಗೌಡ |
| ವಯಸ್ಸು | 53 ವರ್ಷ |
| ಉದ್ಯೋಗ | ಪೋಲಿಸ್ ಇನ್ಸ್ ಪೆಕ್ಟರ್, ಮಾಗಡಿ ರಸ್ತೆ ಪೋಲಿಸ್ ಠಾಣೆ, ಬೆಂಗಳೂರು |
| ವಾಸಸ್ಥಳ | ಬೆಂಗಳೂರು |

**ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ದಿ: 24.08.2018 ರಿಂದ ದಿ: 21.08.2019 ರವರೆಗೂ ತುರುವೇಕೆರೆ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 17.02.2019 ರಂದು ಬೆಳಗ್ಗೆ 11.15 ಗಂಟೆಗೆ ಠಾಣೆಯಲ್ಲಿ ಇರುವಾಗ ಫಿರ್ಯಾದುದಾರರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಠಾಣೆಯ UDR No.2/2019 ಕಲಂ 174(3) of Cr.P.C., ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ, ವರದಿಯನ್ನು ಮೇಲಾಧಿಕಾರಿಯವರಿಗೆ

ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ತಾನು ಪಡೆದ ದೂರನ್ನು ನೋಡಿ ಗುರುತಿಸಿರುತ್ತಾರೆ. **(ಸದರಿ ದೂರು ಜೆರಾಕ್ಸ್ ಪ್ರತಿ ಇದ್ದ ಕಾರಣ ಅದನ್ನು ಗುರುತಿಸಲು ನಿರಾಕರಿಸಲಾಯಿತು)**. ಸದರಿ UDR No.2/2019 ರಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ UDR No.2/2019 ರ ಪ್ರತಿಯನ್ನು **ನಿ.ಪಿ-21** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-21(ಎ) ಎಂದು ಗುರುತಿಸಲಾಯಿತು.

ನಂತರ ತನಿಖೆಯನ್ನು ಮುಂದುವರೆಸಿ, ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಕರಿಯಪ್ಪ, ಬೈರಪ್ಪ ಮತ್ತು ಈಶ್ವರಪ್ಪ ರವರಿಗೆ ನೋಟಿಸ್ ನೀಡಿ ಪಂಚರಾಗಿ ಸಹಕರಿಸಲು ಪಂಚರ ಸಮಕ್ಷಮ ಸಾಕ್ಷಿದಾರರಾದ ಗಜೇಂದ್ರ ರವರ ತೋರಿಸಿದ ಸ್ಥಳದಲ್ಲಿ, ಸ್ಥಳ ಪಂಚನಾಮೆ ಹಾಗೂ ಅಮಾನತ್ತು ಪಂಚನಾಮೆಯನ್ನು 12.00-1.00 ಗಂಟೆಯ ವರೆಗೂ ಜರುಗಿಸಿರುತ್ತೇನೆ. ಸದರಿ ಸ್ಥಳ ಪಂಚನಾಮೆಯ ಸಮಯದಲ್ಲಿ ರಕ್ತ ಮಿಶ್ರಿತ ಮಣ್ಣು ಹಾಗೂ ರಕ್ತವಲ್ಲದ ಮಣ್ಣನ್ನು ಪ್ಲಾಸ್ಟಿಕ್ ಡಬ್ಬಿಯಲ್ಲಿ ಶೇಕರಿಸಿ, ಬಿಳಿ ಬಟ್ಟೆಯಿಂದ ಪ್ರತ್ಯೇಕವಾಗಿ ಪ್ಯಾಕ್ ಮಾಡಿ 'ಹೆಚ್' ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತೇನೆ. ನಂತರ ಅದನ್ನು ಠಾಣೆಯ PF No.10/2019 ರಲ್ಲಿ ನಮೂದಿಸಿರುತ್ತೇನೆ. ತಾನು ಪಂಚರಿಗೆ ನೀಡಿರುವ ನೋಟಿಸ್ ಅಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ನೋಟಿಸ್ ಅನ್ನು **ನಿ.ಪಿ-22** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-22(ಎ) ಎಂದು ಗುರುತಿಸಲಾಯಿತು. ಸದರಿ ಮಹಜರ್ ನಲ್ಲಿ ಹಾಗೂ PF No.10/2019 ರಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. **(ಸದರಿ ದಿಃ 17.02.2019 ರ ಪಂಚನಾಮೆಯನ್ನು ಹಾಗೂ PF**

**No**.10/2019 **ರ ದಾಖಲಾತಿಗಳು ಜೆರಾಕ್ಸ್ ಪ್ರತಿ ಇದ್ದ ಕಾರಣ ಅವುಗಳನ್ನು ಗುರುತಿಸಲು ನಿರಾಕರಿಸಲಾಯಿತು.**)

ನಾನು ಅಮಾನತ್ತು ಪಡಿಸಿಕೊಂಡ ರಕ್ತ ಮಿಶ್ರಿತ ಮಣ್ಣು ಹಾಗೂ ರಕ್ತವಲ್ಲದ ಮಣ್ಣನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ವಸ್ತುಗಳನ್ನು ನೋಡಿ ಗುರುತಿಸಿದ್ದು, ಅವುಗಳು ಈಗಾಗಲೇ ಮುದ್ದೆಮಾಲು-5 ಮತ್ತು 6 ಎಂದು ಗುರುತಿಸಲಾಗಿರುತ್ತದೆ. ಸದರಿ ಮುದ್ದೆಮಾಲು-5 ಮತ್ತು 6 ರ ಮೇಲೆ ಅಂಟಿಸಿರುವ ಚೀಟಿಗಳ ಮೇಲೆ ಸಾಕ್ಷಿಯು ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.

ನಂತರ ಅದೇ ದಿನ ತನಿಖೆಯನ್ನು ಮುಂದುವರೆಸಿ ತುಮಕೂರು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಮಧ್ಯಾಹ್ನ 2.15 ರಿಂದ 4.45 ಗಂಟೆಯ ವರೆಗೂ ಪಂಚರಾದ ಮಂಜುನಾಥ, ರಾಮು ಹಾಗೂ ಶ್ರೀನಿವಾಸ ರವರಿಗೆ ನೋಟಿಸ್ ಜಾರಿ ಮಾಡಿ ಅವರ ಸಮಕ್ಷಮ ಶವ ತನಿಖೆಯನ್ನು ಮಾಡಿರುತ್ತೇನೆ. ಸದರಿ ಸಾಕ್ಷಿದಾರರಿಗೆ ನೀಡಿರುವ ನೋಟಿಸ್ ಅಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ನೋಟಿಸ್ ಈಗಾಗಲೇ ನಿ.ಪಿ-17 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-17(ಸಿ) ಎಂದು ಗುರುತಿಸಲಾಯಿತು. ತಾನು ಜರುಗಿಸಿದ ಶವ ತನಿಖೆಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಶವ ತನಿಖಾ ವರದಿಯು ಈಗಾಗಲೇ ನಿ.ಪಿ-18 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-18(ಸಿ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಶವ ತನಿಖಾ ಕಾಲಕ್ಕೆ ಗಜೇಂದ್ರ, ಧರ್ಮರಾಜು ಹಾಗೂ ಬಸವರಾಜು ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಠಾಣೆಗೆ ಹಾಜರಾಗಿ ಅದೇ ದಿನ

ಸಂಜೆ 7.15 ರಿಂದ 8.00 ಗಂಟೆಯವರೆಗೂ ಶವದ ಮೇಲೆ ಇದ್ದ ವಸ್ತುಗಳನ್ನು ಪಿ.ಸಿ–ಸಾಹೇಬಣ್ಣರವರು ತಂದು ಹಾಜರುಪಡಿಸಿದ್ದನ್ನು ಅಮಾನತ್ತು ಪಂಚನಾಮೆಯ ಮುಖಾಂತರ ಅಮಾನತ್ತು ಪಂಚನಾಮೆಯನ್ನು ಜರುಗಿಸಿ ಅಮಾನತ್ತು ಪಡಿಸಿಕೊಂಡು ಠಾಣಾ PF No.11/2019 ರಲ್ಲಿ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ಅಮಾನತ್ತು ಪಂಚನಾಮೆಯಲ್ಲಿ ಹಾಗೂ PF No.11/2019 ರಲ್ಲಿ ಸಾಕ್ಷಿಯು ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, (**ಸದರಿ ಅಮಾನತ್ತು ಪಂಚನಾಮೆ ಹಾಗೂ PF No**.11/2019 **ದಾಖಲಾತಿಗಳು ಜೆರಾಕ್ಸ್ ಪ್ರತಿ ಇದ್ದ ಕಾರಣ ಅವುಗಳನ್ನು ಗುರುತಿಸಲು ನಿರಾಕರಿಸಲಾಯಿತು**.) ಸಾಕ್ಷಿಯು ಮುದ್ದೆಮಾಲು–1 ರಿಂದ 4 ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ. ಮುದ್ದೆಮಾಲು–1 ರಿಂದ 4 ಮೇಲೆ ಅಂಟಿಸಿರುವ ಚೀಟಿಗಳ ಮೇಲೆ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.

ನಂತರ ದಿಃ19.02.2019 ರಂದು ಮೃತನ ಶವ ಪರೀಕ್ಷಾ ವರದಿಯನ್ನು ಪಡೆದು, ಅದೇ ದಿನ ವೈದ್ಯಾಧಿಕಾರಿಗಳಿಗೆ ಶವದ ಗಾಯಗಳ ಬಗ್ಗೆ ಅಭಿಪ್ರಾಯವನ್ನು ಕೋರಿ ಮನವಿಯನ್ನು ನೀಡಿದ್ದು, ವೈದ್ಯರು ತಮ್ಮ ಅಭಿಪ್ರಾಯ ವರದಿಯನ್ನು ದಿಃ 19.02.2019 ರಂದು ನೀಡಿರುತ್ತಾರೆ. ನಾನು ಸ್ವೀಕರಿಸಿದ ಪಿ.ಎಂ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಪಿ.ಎಂ ವರದಿಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಿ.ಎಂ ವರದಿಯು ಈಗಾಗಲೇ ನಿ.ಪಿ–12 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ–12(ಸಿ) ಎಂದು ಗುರುತಿಸಲಾಯಿತು. ತಾನು ವೈದ್ಯರಿಗೆ ಅಭಿಪ್ರಾಯ ವರದಿಯನ್ನು ಕೋರಿ

ಬರೆದಿರುವ ದಿಃ 19.02.2019 ರ ಮನವಿ ಪತ್ರದಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮನವಿ ಪತ್ರವು ಈಗಾಗಲೇ ನಿಪಿ-13 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-13(ಬಿ) ಎಂದು ಗುರುತಿಸಲಾಯಿತು. ದಿಃ 19.02.2019 ರಂದು ವೈಧ್ಯರಿಂದ ಅಂತಿಮ ಅಭಿಪ್ರಾಯ ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ವರದಿಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಅಭಿಪ್ರಾಯ ವರದಿಯು ಈಗಾಗಲೇ ನಿ.ಪಿ-14 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-14(ಬಿ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ರಾತ್ರಿ 8.00 ಗಂಟೆಗೆ ಠಾಣೆಗ ಹಾಜರಾಗಿ ವೈಧ್ಯರ ಅಭಿಪ್ರಾಯದ ಮೇರೆಗೆ ಠಾಣಾ ಮೊಕದ್ದಮೆ ಸಂಖ್ಯೆಃ 14/2019 ಕಲಂ 302,201 ಐ.ಪಿ.ಸಿ ರಿತ್ಯಾ ಪ್ರಕರಣವನ್ನು ಸ್ವಯಂ ಪ್ರೇರಿತ ದೂರಿನ ಮೇಲೆ ದಾಖಲಿಸಿರುತ್ತೇನೆ. ಸದರಿ ದೂರಿನಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು **ನಿ.ಪಿ-23** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-23(ಎ) ಎಂದು ಗುರುತಿಸಲಾಯಿತು. ತಾನು ದಾಖಲಿಸಿರುವ ಪ್ರವರದಿಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪ್ರವರದಿಯನ್ನು **ನಿ.ಪಿ-24** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-24(ಎ) ಎಂದು ಗುರುತಿಸಲಾಯಿತು.

ಸದರಿ ಪ್ರವರದಿಯನ್ನು ಮಾನ್ಯ ಘನ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ. ಸದರಿ ಪ್ರಕರಣವೂ ಘೋರ ಪ್ರಕರಣವಾದ ಕಾರಣ ತನಿಖೆಯನ್ನು ಚಾಸಾ-28 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರಿ.ಎಂ.ಡಿ ವಕೀಲರಿಂದಃ**

ಸದರಿ ಪ್ರಕರಣದಲ್ಲಿ ಚಾಸಾ–1 ರವರು ದೂರನ್ನು ನೀಡುವ ಮೊದಲು ಘಟನೆಗೆ ಸಂಬಂಧಿಸಿದಂತೆ ನಮ್ಮ ಠಾಣೆಗೆ ಯಾವುದೇ ಮಾಹಿತಿ ಬಂದಿರಲಿಲ್ಲ. ಚಾಸಾ–1 ರವರೊಂದಿಗೆ ದೂರನ್ನು ನೀಡುವ ಕಾಲಕ್ಕೆ ಅವರೊಂದಿಗೆ ಯಾರು ಬಂದಿದ್ದರು ಎಂದು ನಾನು ಗಮನಿಸಿರುವುದಿಲ್ಲ. ಸದರಿ ಚಾಸಾ–1 ರವರು ಮೊದಲೇ ತಯಾರು ಮಾಡಿಕೊಂಡು ಬಂದಿದ್ದ ದೂರನ್ನು ನೀಡಿರುತ್ತಾರೆ. ಸದರಿ ದೂರನ್ನು ಯಾರು ಬರೆದಿರುತ್ತಾರೆಂದು ನಾನು ವಿಚಾರಣೆ ಮಾಡಿರುವುದಿಲ್ಲ. ಸದರಿ ಚಾಸಾ–1 ರವರಿಗೆ ಓದು, ಬರಹ ಬರುವುದರ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ಸದರಿ ಚಾಸಾ–1 ರವರು ದಿಃ 17.02.2019 ರಂದು ನೀಡಿ ದೂರಿನಲ್ಲಿ ನನ್ನ ಗಂಡನ ಕೊಲೆಯಾಗಿರುತ್ತದೆ ಅದರ ಬಗ್ಗೆ ತನಿಖೆ ಮಾಡಿ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ಘಟನಾ ಸ್ಥಳವೂ ನಮ್ಮ ಠಾಣೆಯಿಂದ 5–6 ಕಿ.ಮೀ ಅಂತರದಲ್ಲಿರುತ್ತದೆ. ನಾನು ಘಟನಾ ಸ್ಥಳಕ್ಕೆ ಹೋದಾಗ ಸುಮಾರು 11.40–11.50 ಗಂಟೆಯ ಸಮಯವಾಗಿತ್ತು. ಸದರಿ ಘಟನಾ ಸ್ಥಳಕ್ಕೆ ನಾನು ಹಾಗೂ ನಮ್ಮ ಸಿಬ್ಬಂದಿಗಳಾದ ನಾಲ್ಕು ಜನರು ಹೋಗಿರುತ್ತೇವೆ. ಸದರಿ ಘಟನ ಸ್ಥಳದಲ್ಲಿ ಒಂದು ದ್ವಿಚಕ್ರ ವಾಹನವಿದ್ದು, ಸದರಿ ಮೃತ ಸುರೇಶ್ ರವರು ದೇವಸ್ಥಾನದಲ್ಲಿ ಕುಳಿತ ಸ್ಥಿತಿಯಲ್ಲಿ ಇರುವುದು ಕಂಡು ಬಂದಿರುತ್ತದೆ. ಸದರಿ ಮೃತ ಸುರೇಶ್ ನ ಮೃತ ದೇಹ ಇದ್ದ ಸ್ಥಳದಲ್ಲಿ ಬೇರೆ ಯಾವುದೇ ವಸ್ತುಗಳು ಬಿದ್ದಿರುವುದು ಕಂಡುಬಂದಿರುವುದಿಲ್ಲ. ಸದರಿ ಸ್ಥಳದಲ್ಲಿ ಒಂದು ದ್ವಿಚಕ್ರ ವಾಹನವಿದ್ದು ಅದರ ಹೆಸರು ಹಾಗೂ ನೊಂದಣಿ ಸಂಖ್ಯೆಯು ಬಗ್ಗೆ ತಿಳಿದಿರುವುದಿಲ್ಲ. ಸದರಿ ದ್ವಿಚಕ್ರ ವಾಹನದ ಬಗ್ಗೆ ನಾನು ಯಾವುದೇ ತನಿಖೆಯನ್ನು ಮಾಡಿರುವುದಿಲ್ಲ. ಸದರಿ ವಾಹನವನ್ನು ನಾವು ಅಮಾನತ್ತು

ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ಸದರಿ ಚಾಸಾ–1 ರವರು ನೀಡಿರುವ ದೂರಿನಲ್ಲಿ ನನ್ನ ಗಂಡ ದಿಃ 16.02.2019 ರ ರಾತ್ರಿ 7.00 ಗಂಟೆಯ ಸಮಯದಲ್ಲಿ ಊಟ ಮಾಡುತ್ತಿದ್ದು ಕರೆ ಬಂದ ನಂತರ ಗಾಡಿಯನ್ನು ತೆಗೆದುಕೊಂಡು ಹೋಗಿರುತ್ತಾರೆಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ನಾನು ಸದರಿ ವಿಷಯದ ಬಗ್ಗೆ ತನಿಖೆಯನ್ನು ಮಾಡಿರುವುದಿಲ್ಲ ಎಂದರೆ ಸರಿ.

ಸದರಿ ಮೃತ ಸುರೇಶ್ ನ ಬಳಿ 30,000/– ಹಣ ಎಲ್ಲಿಂದ ಬಂದಿರುತ್ತದೆ ಎಂದು ನಾನು ತನಿಖೆ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಮೃತ ಸುರೇಶ್ ಈತನ ಮೊಬೈಲ್ ನ ಬಗ್ಗೆ ಯಾವುದೇ ತನಿಖೆಯನ್ನು ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಪಂಚನಾಮೆಗೆ ಹೋದಾಗ ಮೃತನ ದೇಹವನ್ನು ನೋಡಿದ್ದು, ಆತನ ದೇಹದ ಮೇಲೆ ಎಷ್ಟು ಗಾಯಗಳಾಗಿರುತ್ತದೆ ಎಂದು ನಾನು ನಿಖರವಾಗಿ ಗಮನಿಸಿರುವುದಿಲ್ಲ. ಸದರಿ ಸುರೇಶ್ ಈತನ ಶವ ಬಿದ್ದಿದ್ದ ಸ್ಥಳದಲ್ಲಿ ಮೂರು ದಿಕ್ಕಿನಲ್ಲೂ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಗಳಲ್ಲಿ ವಾಹನಗಳು ಓಡಾಡುತ್ತಿರುತ್ತವೆ ಎಂದರೆ ಸರಿ. ಸದರಿ ಪಂಚನಾಮೆಯಲ್ಲಿ ತಯಾರಿಸಿರುವ ನಕ್ಷೆಯನ್ನು ನಮ್ಮ ಎ.ಎಸ್.ಐ ರವರು ಮಾಡಿರುತ್ತಾರೆ. ಸದರಿ ನಕ್ಷೆಯನ್ನು ಯಾವುದೋ ಪರಿಣಿತರ ಸಹಾಯದಿಂದ ಮಾಡಿರುತ್ತಾರೆ. ಸದರಿ ಮೃತ ದೇಹ ಬಿದ್ದಿದ್ದ ಸ್ಥಳದಿಂದ ಮೆಟ್ಟಿಲುಗಳು 9 ಅಡಿ ಅಂತರದಲ್ಲಿರುತ್ತದೆ ಎಂದರೆ ಸರಿ. ಸದರಿ ನಕ್ಷೆಯಲ್ಲಿ ತೋರಿಸಿರುವಂತೆ ಮೂರು ಮೆಟ್ಟಿಲುಗಳು ಮಾತ್ರ ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ನಕ್ಷೆಯ ಪ್ರಕಾರ ಒಂದು ಮೆಟ್ಟಿಲಿನ ಎತ್ತರ ಅಂದಾಜು ಮೂರು ಅಡಿ ಇರಬಹುದು ಎಂದರೆ ಸರಿ. ಸದರಿ ಸ್ಥಳದಲ್ಲಿ ನಾವು ಹೋದಾಗ ಜನ ಸೇರಿದ್ದರು ಎಂದರೆ ಸರಿ. ಸದರಿ ಮೃತ ಸುರೇಶ್ ಧರಿಸಿದ್ದ ಜರ್ಕಿನ್, ಶರ್ಟ್ ಹಾಗೂ

ಪ್ಯಾಂಟ್ ಗಳಲ್ಲಿ ರಕ್ತದ ಕಲೆಗಳು ಎಷ್ಟು ಸ್ಥಳಗಳಲ್ಲಿ ಆಗಿರುತ್ತದೆ ಎಂದು ನನಗೆ ನಿಖರವಾಗಿ ತಿಳಿದಿರುವುದಿಲ್ಲ.

**(ಈ ಅಂತದಲ್ಲಿ ನ್ಯಾಯಾಲಯದ ಕಾಲವಕಾಶ ಮುಗಿದಿದ್ದು, ಮುಂದಿನ ಪಾಟೀ ಸವಾಲನ್ನು ಮಧ್ಯಾಹ್ನ 2.45 ಗಂಟೆಗೆ ಮುಂದೂಡಲಾಯಿತು.)**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಹೇಮಂತ್ ಕುಮಾರ್ ಸಿ.ಆರ್)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**

<u>ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರಿ.ಎಂ.ಡಿ ವಕೀಲರಿಂದಃ</u>**

ನಾನು ಚಾಸಾ–1 ರವರು ಮನೆಯಿಂದ 7.45 ಗಂಟೆಗೆ ಹೋದ ನಂತರ ತನ್ನ ಗಂಡ ಮನೆಗೆ ಬರದೆ ಇದ್ದ ಬಗ್ಗೆ ನಾನು ಚಾಸಾ–1 ರವರನ್ನು ವಿಚಾರಣೆ ಮಾಡಿರುತ್ತೇನೆ. ಸದರಿ ವೈದ್ಯರ ಪಿ.ಎಂ ವರದಿ ನೀಡುವ ವರೆಗೂ ಮೃತ ಸುರೇಶ್ ರವರ ಕೊಲೆಯಾಗಿರುತ್ತದೆ ಎಂದು ನಮಗೆ ಯಾವುದೇ ಅಭಿಪ್ರಾಯವಿರಲಿಲ್ಲ ಎಂದರೆ ಸರಿ. ಸದರಿ ಮೃತ ಸುರೇಶ್ ಹಾಗೂ ಆರೋಪಿ ಗೋವಿಂದರಾಜುರವರ ನಡುವೆ ಈ ಹಿಂದೆ ಪ್ರಕರಣಗಳು ದಾಖಲಾಗಿದ್ದ ಬಗ್ಗೆ ನನಗೆ ನಂತರ ತಿಳಿದು ಬಂದಿರುತ್ತದೆ. ಸದರಿ ವೈದ್ಯರು ನೀಡಿರುವ ನಿ.ಪಿ–12 ಶವ ಪರೀಕ್ಷಾ ವರದಿಯಲ್ಲಿ

ಮೃತ ಪಟ್ಟಿರುವ ನಿಖರವಾದ ಸಮಯ ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ವರದಿಯಲ್ಲಿ ಪಿ.ಎಂ ಮಾಡುವ 12-24 ಗಂಟೆಯೊಳಗೆ ಮೃತ ಪಟ್ಟಿರುತ್ತಾರೆಂದು ನಮೂದು ಇರುತ್ತದೆ. ನಾನು ಸದರಿ ಮೊಕದ್ದಮೆ ಸಂಖ್ಯೆ 14/2019 ಅನ್ನು ದಿಃ 19.02.2019 ರಂದು ದಾಖಲಿಸಿರುತ್ತೇನೆ. ಸದರಿ ಪ್ರವರದಿಯನ್ನು ದಾಖಲಿಸಲು ಏಕೆ ತಡವಾಗಿರುತ್ತದೆ ಎಂದು ಕಾರಣ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ಸ್ವಯಂ ಪ್ರೇರಿತ ದೂರನ್ನು ದಾಖಲಿಸಿರುವ ಕಾರಣ ಏಕೆ ತಡವಾಗಿರುತ್ತದೆ ಎಂದು ಕಾರಣ ನೀಡುವ ಅವಶ್ಯಕತೆ ಇರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ದಿಃ 17.02.2019 ರಂದು ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಹಾಗೂ ಮುದ್ದೆಮಾಲು-5 ಮತ್ತು 6 ಇವುಗಳನ್ನು ಪಂಚನಾಮೆಯನ್ನು ಜರುಗಿಸಿ ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ದಿಃ 17.02.2019 ರಂದು ತುಮಕೂರು ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿರುವುದಿಲ್ಲ ಹಾಗೂ ಮೃತ ಸುರೇಶ್ ಈತನ ಶವ ತನಿಖೆಯನ್ನು ಪಂಚರ ಸಮಕ್ಷಮ ಜರುಗಿಸಿರುವುದಿಲ್ಲ ಹಾಗೂ ಯಾವುದೇ ಪಂಚರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಪಂಚನಾಮೆಯ ಅಡಿಯಲ್ಲಿ ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮೃತ ಸುರೇಶ್ ಮಧ್ಯಪಾನ ಮಾಡಿ ಮೆಟ್ಟಿಲಿನಿಂದ ಬಿದ್ದು ಮೃತ ಪಟ್ಟಿದ್ದರು ಸಹಃ ಆರೋಪಿತನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೂ ಹಾಗೂ ಆರೋಪಿತನಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆರೋಪಿ ಹಾಗೂ ಮೃತ ಸುರೇಶ್ ನ ನಡುವೆ ಹಳೇ

ಪ್ರಕರಣಗಳು ಇದ್ದ ಕಾರಣ ಚಾಸಾ-1 ರವರ ಮಾತನ್ನು ಕೇಳಿ ನಾನು ಆರೋಪಿತನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**(ಮರುವಿಚಾರಣೆ ಇಲ್ಲವೆಂದಿದ್ದಾರೆ).**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಹೇಮಂತ್ ಕುಮಾರ್ ಸಿ.ಆರ್)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**